ಹತ್ತು ನಿಮಿಷ, ಇಪ್ಪತ್ತು ನಿಮಿಷ, ಅರ್ಧ ಗಂಟೆ ಕಳೆದರೂ ನಾಟಕ ಮುಂದುವರಿಯಲಿಲ್ಲ. ಊರೆಲ್ಲ ಹುಡುಕಾಡಿದರೂ ಆ ನಟಿ ಮತ್ತು ನಾಟಕದ ಹೀರೊ ಪತ್ತೆಯಾಗಲಿಲ್ಲ. ತಾಳ್ಮೆಗೆಟ್ಟ ಪ್ರೇಕ್ಷಕರು ಕುರ್ಚಿಗಳನ್ನು ಪುಡಿಗಟ್ಟಿದರು. ಟೆಂಟ್‌ಗಳನ್ನು ಹರಿದು ಚೂರು ಮಾಡಿದರು. ಜನ ಹೆದರಿ ದಿಕ್ಕಾಪಾಲಾಗಿ ಓಡಿದರು. ಪೈಮಾಮ್ ನೇಪಥ್ಯದಲ್ಲಿ ಕಣ್ಣಿಗೆ ಕತ್ತಲು ಕವಿದು ನೆಲಕ್ಕುರುಳಿದರು.

ರಿಹರ್ಸಲ್ ವೇಳೆ ಆ ನಟಿಗೂ ನಾಟಕದ ಹೀರೊ ಈ ಊರಿನ ಪ್ರೇಮಾನಂದನಿಗೂ ಪ್ರೇಮಾಂಕುರವಾಯಿತೆಂದೂ, ನಾಟಕದ ಮಧ್ಯೆಯೇ ಇಬ್ಬರೂ ಯಾವುದೋ ಊರಿಗೆ ಓಡಿ ಹೋದರೆಂದೂ ಮರುದಿನ ಊರಿಗೆ ಊರೇ ಮಾತಾಡಿಕೊಂಡಿತು...

★★★



ಎಂಬತ್ತರ ದಶಕದ ಮಧ್ಯಭಾಗ ಅದು. ಗಾಂಧಿಪುರದ ಯಾರ ಮನೆಯಲ್ಲೂ ಆಗ ಟಿವಿ ಇರಲಿಲ್ಲ. ಪೈಮಾಮ್ ತಲೆಯಲ್ಲಿ ಹೊಸ ಐಡಿಯಾ ಮೊಟ್ಟೆ ಹಾಕಿತು. ದುಬಾರಿ ಬೆಲೆಯ ಟಿವಿಯನ್ನು ಊರ ಜನರಂತೂ ಕೊಳ್ಳಲಾಗದು. ಆದರೆ, ಅವರಿಗೆ ನಾನು ಟಿವಿ ತೋರಿಸುವೆ ಎಂದು ಹುರುಪಿನಿಂದ ಮುಂಬಯಿಗೆ ಹೋದ ಪೈಗಳು ಅಲ್ಲಿಂದ ಅತ್ಯಾಧುನಿಕ ತಂತ್ರಜ್ಞಾನದ ಪ್ರೊಜೆಕ್ಟರ್ ಅನ್ನು ತಂದು ಚಿಕ್ಕ ಥಿಯೇಟರ್ ಸ್ಥಾಪಿಸಿಯೇ ಬಿಟ್ಟರು. ರಾಮಾಯಣ ಧಾರಾವಾಹಿ ತೋರಿಸುವ ಮೂಲಕ ಥಿಯೇಟರ್ ಓಪನ್ ಆಯಿತು. ಪ್ರತಿ ಭಾನುವಾರ ಬೆಳಗ್ಗೆ 50 ಪೈಸೆ ಕೊಟ್ಟು ಊರ ಜನ ರಾಮಾಯಣ ನೋಡಿ ರೋಮಾಂಚಿತರಾದರು. ಕ್ರಮೇಣ ಪೈಮಾಮ್ ಸಂಜೆ ಹೊತ್ತು ವಾರ್ತೆ, ಧಾರಾವಾಹಿ ಇತ್ಯಾದಿ ವಿಶೇಷ ಕಾರ್ಯಕ್ರಮಗಳನ್ನೂ ತೋರಿಸಲಾರಂಭಿಸಿದರು.

"ನೋಡಿ, ಇಡೀ ರಾಜ್ಯದಲ್ಲಿ ಟಿವಿ ನೋಡ್ತಾ ಇರೋ ಹಳ್ಳಿ ನಮ್ಮದು ಮಾತ್ರ, ಇಡೀ ರಾಜ್ಯದಲ್ಲಿ ಪ್ರೊಜೆಕ್ಟರ್ ಟೆಕ್ನಾಲಜಿ ಬಳಸ್ತಾ ಇರೋದು ನಾನು ಮಾತ್ರ" ಎಂದು ಪೈಮಾಮ್ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಮುಂದೆ ಅವರು ಭಕ್ತಿಪ್ರಧಾನ, ಸದಭಿರುಚಿಯ ಸಿನಿಮಾಗಳನ್ನು ತೋರಿಸಲಾರಂಭಿಸಿದರು. ಹನಿಹನಿ ಕೂಡಿ ಹಳ್ಳ ಎನ್ನುವಂತೆ ಪೈಮಾಮ್‌ನ ಗಲ್ಲಾ ಪೆಟ್ಟಿಗೆಯಲ್ಲಿ ನಿಧಾನಕ್ಕೆ ಕಾಸು ಶೇಖರವಾಗತೊಡಗಿತು. ಈ ಟಿವಿ ಥಿಯೇಟರ್ ಪೈಮಾಮನ ಕೈಹಿಡೀತು ಬಿಡಿ, ಇನ್ನಿವರು ಸೈ ಬಿಡಿ ಎಂದು ಊರ ಜನ ಮಾತನಾಡಿಕೊಳ್ಳಲಾರಂಭಿಸಿದರು.

ಬದುಕು ಆರಾಮದಾಯಕವಾಗುತ್ತಿದೆ ಎಂದು ಸುಮ್ಮನೆ ಕೂರುವ ಜಾಯಮಾನವೇ ಅಲ್ಲ ಅವರದು. ಭಾರತ–ಪಾಕಿಸ್ತಾನ ನಡುವಿನ ಶಾರ್ಜಾ ಕಪ್ ಕ್ರಿಕೆಟ್ ಪಂದ್ಯವನ್ನ ಥಿಯೇಟರ್‌ನಲ್ಲಿ ತೋರಿಸುತ್ತೇನೆ ಎಂದು ಡಂಗುರ ಸಾರಿದರು. ಅಲ್ಲಿಯವರೆಗೆ ರೇಡಿಯೊದಲ್ಲೆ ಕಾಮೆಂಟರಿ ಕೇಳುತ್ತ ಕ್ರಿಕೆಟ್ ಮ್ಯಾಚ್‌ನ ಮಜಾ ಸವಿಯುತ್ತಿದ್ದ ಗಾಂಧಿಪುರದ ಹುಡುಗರ ಖುಷಿಗೆ ಪಾರವೇ ಇರಲಿಲ್ಲ. "ಈ ಮ್ಯಾಚನ್ನ ನಮ್ಮೂರಿನ ಹಿಂದೂ ಹುಡುಗರು ಮತ್ತು ನವಾಯತ ಹುಡುಗರು ಒಟ್ಟಿಗೇ ಸಹೋದರರಂತೆ ಕೂತು ನೋಡಬೇಕು, ಈ ಪಂದ್ಯಕ್ಕೆ ಟಿಕೆಟಿಲ್ಲ ಫ್ರೀ" ಎಂದು ಪೈಮಾಮ್ ಘೋಷಿಸಿದರು.

ಥಿಯೇಟರ್ ಹೌಸ್ ಫುಲ್ ಆಯಿತು. ಸುಮಾರು ಹೊತ್ತಿನವರೆಗೆ ಎರಡೂ ಕೋಮಿನ ಹುಡುಗರು ಪರಸ್ಪರ ಸೌಹಾರ್ದತೆಯಿಂದ ಕುಶಾಲು ಮಾಡಿಕೊಳ್ಳುತ್ತ ಮ್ಯಾಚ್ ನೋಡಿದರು. ಆದರೆ, ಪಾಕಿಸ್ತಾನದ ಅಕೀಬ್ ಜಾವೇದ್ ಯಾವಾಗ ಸತತ ಮೂರು ಚೆಂಡುಗಳಲ್ಲಿ ಭಾರತದ ಬ್ಯಾಟ್ಸ್‌ಮನ್‌ಗಳಾದ ರವಿ ಶಾಸ್ತ್ರಿ, ಅಜರುದ್ದೀನ್ ಮತ್ತು ಸಚಿನ್ ತೆಂಡೂಲ್ಕರ್‌ರನ್ನು ಎಲ್‌ಬಿಡಬ್ಲ್ಯೂ ಮಾಡಿ ಹ್ಯಾಟ್ರಿಕ್ ಸಾಧಿಸಿದನೋ ಥಿಯೇಟರ್‌ನೊಳಗಿನ ವಾತಾವರಣ ನಿಧಾನಕ್ಕೆ